O.S. No. 49/2022
PW-1

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **20.03.2024**

ಪಾಟಿ ಸವಾಲುಃ ಶ್ರೀ ಎನ್ ಹೆಚ್ ಎಫ್ ವಕೀಲರಿಂದ

ನಾನು ಅವಿದ್ಯಾವಂತೆ. ನಾನು ಅಸ್ಪತ್ರೆಯಲ್ಲಿ ಜನಿಸಿದ್ದೇನೆ. ನಾನು ಹುಟ್ಟಿದ ದಿನಾಂಕ ಮತ್ತು ವರ್ಷ ನನಗೆ ಗೊತ್ತಿಲ್ಲ. ನಮ್ಮ ಜನಾಂಗದಲ್ಲಿ ಬಲಗೈ ಮತ್ತು ಎಡಗೈ ಎಂಬ ವಿಭಾಗ ಉಂಟು ಎಂದರೆ ಸರಿ. ಬಲಗೈ ಹೆಗತ್ತೂರು ಕುಳ್ಳ ಬಿನ್ ಚನ್ನ ಅವರ ವಿಚಾರ ನನಗೆ ಗೊತ್ತು. ಸದರಿ ಬಲಗೈ ಹೆಗತ್ತೂರು ಕುಳ್ಳ ರವರಿಗೆ ಒಬ್ಬನೇ ಮಗನಿದ್ದು ಅವರ ಹೆಸರು ಮೂರ್ತಿ ಅಗಿರುತ್ತದೆ. ಸದರಿ ಕುಳ್ಳಯ್ಯನಿಗೆ ಕರಿಯಯ್ಯ ಎಂಬ ಒಬ್ಬ ತಮ್ಮ ಇದ್ದ ಎಂದರೆ ಸುಳ್ಳು. ಕುಳ್ಳಯ್ಯನಿಗೆ ಒಬ್ಬಳೇ ಹೆಂಡತಿ ಇದ್ದು ಅಕೆಯ ಹೆಸರು ದೇವಿ ಅಲಿಯಾಸ್ ದೇವಮ್ಮ ಅಗಿರುತ್ತದೆ. ದೇವಮ್ಮನಿಗೆ ಒಂದು ಹೆಣ್ಣು ಮಗಳು ಜಯಮ್ಮ ಇದ್ದಾರೆಂದಾರೆ ಸರಿಯಲ್ಲ. ಮೂರ್ತಿಯವರು ತಾಯಿಯ ಹೆಸರು ಪುಟ್ಟಮ್ಮ ಎಂದರೆ ಸರಿಯಲ್ಲ ಅವರ ತಾಯಿ ಹೆಸರು ದೇವಮ್ಮ. ಕರಿಯಯ್ಯನಿಗೆ ದಾಯನಿ, ರವಿ, ಕಾಳ, ಲಲಿತಾ, ಜಯಂತಿ, ಮತ್ತು ಪಾಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ 51 ಮತ್ತು 52 ಅಗಿದ್ದು ಒಟ್ಟಾಗಿ 12 ಎಕರೆ ಜಮೀನು ಇರುತ್ತದೆ. ಸರ್ವೆ ನಂ 51 ರಲ್ಲಿ 10 ಎಕರೆ ಹಾಗೂ ಸರ್ವೆ ನಂ 52 ರಲಿಲ 2 ಎಕರೆ ಜಮೀನು ಇರುತ್ತದೆ. ದಾವಾ ಸ್ವತು್ತಗಳಲ್ಲಿ ನಾನು ಸ್ವಾಧೀನದಲ್ಲಿಲ್ಲ. ದಾವಾ ಸ್ವತ್ತುಗಳಲ್ಲಿ ರಾಗಿ ಭತ್ತ ಹಾಗೂ ಕಾಳುಗಳನ್ನು ಬೆಳೆಯುತ್ತಾರೆ. ನಾನು ಹೆಬ್ಬಾಲೆಯಲ್ಲಿ ವಾಸವಿದ್ದೇನೆ. ನನ್ನ ವಾಸದ ಸ್ಥಳದಿಂದ ದಾವಾ ಸ್ವತ್ತು 8 ಕಿ ಮೀ ದೂರದಲ್ಲಿರುತ್ತದೆ. ದಾವಾ ಸ್ವತ್ತಿಗೆ ನಾನು ವಾರಕ್ಕೆ 2 ಬಾರಿ ಹೋಗುತ್ತೇನೆ. ಸರ್ವೆ ನಂ 51 ರ ಪೂರ್ವಕ್ಕೆ ದೇವಮ್ಮ ಪಶ್ಚಿಮಕ್ಕೆ ದೇವಮ್ಮ ಉತ್ತರಕ್ಕೆ ಜವರಯ್ಯ ದಕ್ಷಿಣಕ್ಕೆ ಅವರ ಹೆಸರು ಮರೆತುಹೋಗಿರುತ್ತದೆ. ಸರ್ವೆ ನಂ 52 ರ ಪೂರ್ವಕ್ಕೆ

ದೇವಮ್ಮ ಪಶ್ಚಿಮಕ್ಕೆ ದೇವಮ್ಮ ಉತ್ತರಕ್ಕೆ ಮರೆತುಹೋಗಿರುತ್ತದೆ ದಕ್ಷಿಣಕ್ಕೆ ದೇವಮ್ಮ ನವರ ಜಾಗ ಇರುತ್ತದೆ. ಸರ್ವೇ ನಂ 51 ರ ಯಾವ ದಿಕ್ಕಿಗೆ ಸರ್ವೆ ನಂ 52 ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ನನ್ನ ಗಂಡನ ಹೆಸರು ರಾಜು. ನನಗೆ ಮೂರು ಜನ ಗಂಡು ಮಕ್ಕಳು. ನಾವು ಎಡಗೈ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಪ್ರತಿವಾದಿ 5 ರಿಂದ 7 ರವರಿಗೆ ನನಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಒಂದೇ ಮಕ್ಕಳು ಎಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿ 5 ರಿಂದ 7 ರವರ ನಡುವೆ ಸಂಬಂದ ಅನ್ಯೂನ್ಯವಾಗಿದೆ. 5 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಿದ್ದಾರೆ. 6 ನೇ ಪ್ರತಿವಾದಿ ಮರೂರಿನಲ್ಲಿ ವಾಸವಿದ್ದಾರೆ. 7 ನೇ ಪ್ರತಿವಾದಿ ಕುಶಾಲನಗರದಲ್ಲಿ ವಾಸವಿದ್ದಾರೆ. 5 ನೇ ಪ್ರತಿವಾದಿ ಬೆಂಗಳೂರಿನ ಉದ್ಯೋಗ ವಿನಿಮಯ ಕಚೇರಿಯಲ್ಲಿ ಅಧಿಕಾರಿಯಾಗಿದ್ದಾರೆ. 5 ನೇ ಪ್ರತಿವಾದಿ ಬೆಂಗಳೂರಿನ ಗಾಂಧಿನಗರದಲ್ಲಿ ಅವರ ಕಚೇರಿಯ ಬಳಿ ವಾಸವಿದ್ದಾರೆ. 6 ನೇ ಪ್ರತಿವಾದಿಯ ಹೆಬ್ಬಾಲೆಯಲ್ಲಿದೆ. ಅತನಿಗೆ ಕೆಲಸ ಇಲ್ಲ. 7 ನೇ ಪ್ರತಿವಾದಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೂಪರ್ವೈಸರ್ ಅಗಿ ಕೆಲಸ ಮಾಡುತ್ತಿದ್ದಾರೆ. ಯಾವ ಊರಿನಲ್ಲಿ ಎಂದು ನನಗೆ ನೆನಪಿಲ್ಲ.

ನನ್ನ ಜನನ ಪ್ರಮಾಣಪತ್ರ ಲಭ್ಯವಿಲ್ಲ. ನನಗೆ ಮದುವೆಯಾಗಿ ಸುಮಾರು 38 ರಿಂದ 30 ವರ್ಷವಾಗಿದು ದಿನಾಂಕ ನೆನಪಿಲ್ಲ. ನನ್ನ ಮದುವೆಗೆ ಪತ್ರಿಕೆ ಮಾಡಿಸಲಾಗಿತ್ತು. ಸದರಿ ಪತ್ರಿಕೆ ಈಗ ನನ್ನ ಬಳಿ ಇಲ್ಲ. ನಾನು ಮತ್ತು 5 ರಿಂದ 7 ಪ್ರತಿವಾದಿಗಳು ಸಂಬಂದಿಕರು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೂ ಮತ್ತು 5 ರಿಂದ 7 ಪ್ರತಿವಾದಿಗಳಿಗೆ ಸಂಬಂದ ಇಲ್ಲದ ಕಾರಣ ಅದನ್ನು ಮುಚ್ಚುಮಾರೆ ಮಾಡಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 5 ರಿಂದ 7 ಪ್ರತಿವಾದಿಗಳು ಯಾವ ಸರ್ವೆ ನಂ ನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳಲು ಬರುವುದಿಲ್ಲ.

5 ರಿಂದ 7 ಪ್ರತಿವಾದಿಗಳ ಸ್ವತ್ತನ್ನು ಕಾಳಾಹಿಸುವ ಸಲುವಾಗಿ ಸುಳ್ಳು ದಾವಾ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರ ಹಕ್ಕುದಾಳಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ನೇ ಎದುರುದಾರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲುನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

sd

ಪ್ರ ದ ನ್ಯಾ ದಂ, ಕುಶಾಲನಗರ